
# ಗಂಗಾಧರ ಚಿತ್ತಾಲರ ಎರಡು ಕವಿತೆಗಳು



## ಸುಧೀರ

(ಅಲ್ಪಾಯುಷಿ ವಿಮಾನವೀರ ನನ್ನ ಮೈದುನನ ನೆನಪಿಗಾಗಿ)

ಮಣ್ಣಾಗಿದ್ದಾನೆ ಹುಡುಗ!
ಕಣ್ಣಮುಂದೇ ಬೆಳೆದು ಕಣ್ತುಂಬಿ ನಿಂತವನು
ಎಲ್ಲಿಲ್ಲದಂಥ ಪ್ರಾಣೋಲ್ಲಾಸ ತಂದವನು
ಹೆದೆಗೇರಿ ಬಿಗಿಗೊಂಡ ಕೋದಂಡದಂಥವನು
ಈಗ ಮಣ್ಣಾಗಿದ್ದಾನೆ.
ಈ ಪಿಳ್ಳೆಯ ಲಕ್ಷ್ಯವೆಲ್ಲ ಅಂತರಿಕ್ಷಕ್ಕೆ ಎಂದು ಕಂಡಾಗಲೇ ಮನ ಅಳುಕಿತ್ತು
ಇವನ ಅಂಗಾಂಗದಲ್ಲಿ ಮಾತ್ರ
ಮುಗಿಲ ನೀಲಿಯ ಕುಡಿದು ಮೋಡಗಳಲೊಡನಾಡಿ ಕುಶಲ ಕೇಳುವ ಚಪಲ ತುಳುಕುತ್ತಿತ್ತು
ನೆಲಕ್ಕೇ ಕಾಲು ತಾಕದ ಬೀಸುನಡೆಯಲ್ಲಿ
ಗಾಳಿ ಬೆನ್ನೇರಿ ಬಾನಿಗೆ ಲಗ್ಗೆ ಇಡುವವನ ಸೆಳವಿತ್ತು.
ಒಂದು ಮುಂಜಾನೆ ಕಣ್ಣುಜ್ಜಿ ನೋಡುತ್ತೇವೆ
ದೋರ್ದಂಡ ಉದ್ದಂಡನಾಗಿ ನಿಂತಿದ್ದಾನೆ
ಸನ್ನದ್ಧ!
ಮಾತುಮಾತಿಗೆ ಉಕ್ಕು ಉತ್ತುಂಗ ಉತ್ಸಾಹ
ಕ್ಷಣ ನಿಲ್ಲಗೊಡದ ಖುಷಿ, ನೆರಳನರಿಯದ ಭಾವ

ಒಮ್ಮೊಮ್ಮೆ ಅನ್ನಿಸಿತ್ತು
ಇವನ ಧಮನಿಗಳಲ್ಲಿ ಸುರಿವ ನೆತ್ತರ ವೇಗ ಈ ನೆಲದ್ದೇ ಅಲ್ಲ.
ಈತ ನಮ್ಮಂತಿಲ್ಲಿ ಬವಣೆ ಬಳಲಿಕೆಯ ತಲೆಭಾರ
ಸಾವರಿಸುತ್ತ ಕಾಲೆಳೆದು ದಿನ ನೂಕಿ ತೊಳಲಬಂದವನಲ್ಲ
ಆದರೂ ಎಣಿಸಿರಲಿಲ್ಲ
ಈ ಗಗನವೇಧಿ
ಇಷ್ಟೊಂದು ತ್ವರೆಯ ಆತುರದಿಂದ ಬಂದವನು

ಹತ್ತೇ ದಿನ ತಿತ್ತಿರಿ ಕುಣಿದು
ಅಲ್ಲಿಲ್ಲಿ ನುಗ್ಗಿ ಹಿಗ್ಗಿ ರಂಗುರಂಗಿನ ನೂರು ಗುಳ್ಳೆ ಊದಿ ಹಾರಿಸಿ
ತುಟಿ ಮೇಲೆ ಜೇನರುಚಿ ತೊಟ್ಟಿಕ್ಕುವಾಗಲೇ ನೆಕ್ಕಿ ಚಪ್ಪರಿಸಿ
ಹಗಲಿಡೀ ಮುಂಜಾವಿನಂತೆ ಕಳೆದು
ಬಿಸಿಲೇರಿ ಬೈಗಿಳಿವ ಮೊದಲಿಗೇ ಹೊರಡುವನು.

